

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13-11-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದು ಬದರೀ ಸಹಾಬರ ಬಗ್ಗೆ ಪ್ರಸ್ತಾಪಿಸಲಾಗುವುದು. ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ)ರ ಬಗ್ಗೆ ಹೇಳುತ್ತಿದ್ದೆ. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಉಹದ್ ಯುದ್ಧದ ದಿನದಂದು ನನ್ನ ತಂದೆಯ ಶರೀರವನ್ನು ವಿರೂಪಗೊಳಿಸಲಾದ ಸ್ಥಿತಿಯಲ್ಲಿ ಹಝ್ರತ್ ಪೈಗಂಬರ್(ಸ)ರ ಮುಂದೆ ತರಲಾಗಿತ್ತು. ಎಂದರೆ ಅವರ ಶರೀರದ ಭಾಗಗಳನ್ನು ತುಂಡರಿಸಲಾಗಿತ್ತು. ವಿಶೇಷವಾಗಿ ಕಿವಿಗಳನ್ನು ಮತ್ತು ಮೂಗನ್ನು ಕತ್ತರಿಸಲಾಗಿತ್ತು. ಅವರ ಮಯ್ಯತ್ತನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ಇರಿಸಲಾಯಿತು. ಆಗ ನಾನು ನನ್ನ ತಂದೆಯ ಮುಖದಿಂದ ಬಟ್ಟೆಯನ್ನು ಸರಿಸಲು ಹೋದಾಗ, ಜನರು ನನ್ನನ್ನು ತಡೆದರು. ಅನಂತರ ಒಬ್ಬಳು ಹೆಂಗಸು ಜೋರಾಗಿ ಅಳುವುದನ್ನು ಜನರು ಕೇಳಿದರು. ಅವರು ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ)ರ ಮಗಳಾದ ಹಝ್ರತ್ ಫಾತಿಮ ಬಿನ್ತ್ ಅಮ್ರ್ ಆಗಿದ್ದಾಳೆ ಎಂದು ಯಾರೋ ಹೇಳಿದರು. ಅವರು ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರ ಸಹೋದರಿಯಾಗಿದ್ದಳು ಎಂದೂ ಹೇಳಲಾಗುತ್ತದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಳಬೇಡ, ಏಕೆಂದರೆ ಮಲಕುಗಳು ನಿರಂತರವಾಗಿ ತಮ್ಮ ರೆಕ್ಕೆಗಳಿಂದ ಅವರಿಗೆ ನೆರಳು ನೀಡುತ್ತಿದ್ದಾರೆ.

ಉಹದ್ ಯುದ್ಧದಲ್ಲಿ ಶಹೀದ್ ಆದವರ ಜನಾಝ ನಮಾಝ್ ಬಗ್ಗೆ ವಿವಿಧ ಅಭಿಪ್ರಾಯಗಳಿವೆ. ಸಹೀಹ್ ಬುಖಾರಿಯ ವರದಿಯಲ್ಲಿ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ)ರ ವರದಿ ಪ್ರಕಾರ ಅವರನ್ನು ಸ್ನಾನ ಮಾಡಿಸಲಾಗಿರಲಿಲ್ಲ ಮತ್ತು ಅವರ ಜನಾಝ ನಮಾಝ್ ಸಹ ನಿರ್ವಹಿಸಲಾಗಿರಲಿಲ್ಲ. ಸಹೀಹ್ ಬುಖಾರಿಯದ್ದೇ ಮತ್ತೊಂದು ವರದಿಯಲ್ಲಿ ಪೈಗಂಬರ್(ಸ) ಉಹದ್ ಯುದ್ಧದಲ್ಲಿ ಶಹೀದ್ ಆದವರ ನಮಾಝ್ ಜನಾಝ ನಿರ್ವಹಿಸಿದ್ದರು ಎಂದು ಹೇಳಲಾಗಿದೆ. ಸಹೀಹ್ ಬುಖಾರಿಯ ಮತ್ತೊಂದು ವರದಿ ಪ್ರಕಾರ ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದಲ್ಲಿ ಶಹೀದ್ ಆದವರ ಜನಾಝ ನಮಾಝ್ ಎಂಟು ವರ್ಷಗಳ ನಂತರ ನಿರ್ವಹಿಸಿದ್ದರು. ಸುನನ್ ಇಬ್ನು ಮಾಜದಲ್ಲಿ ಹೀಗಿದೆ: ಹಝ್ರತ್ ಪೈಗಂಬರ್(ಸ) ಹತ್ತು ಹತ್ತು ಶಹೀದರ ಜನಾಝ ನಮಾಝ್ ನಿರ್ವಹಿಸುತ್ತಿದ್ದರು. ಹಝ್ರತ್ ಹಂಝ(ರ) ಮಯ್ಯತ್ ಹಝ್ರತ್ ಪೈಗಂಬರ್(ಸ)ರ ಸಮೀಪವೇ ಇರುತ್ತಿತ್ತು. ಇತರ ಶಹೀದರ ಮಯ್ಯತನ್ನು ನಮಾಝ್ ನಂತರ ಕೊಂಡು ಹೋಗಲಾಗುತ್ತಿತ್ತು.

ಸುನನ್ ಅಬೂ ದಾವೂದ್‌ನಲ್ಲಿ ಹೀಗೆ ವರದಿಯಾಗಿದೆ: ಅವರನ್ನು ಅವರ ರಕ್ತ ಎಂದರೆ ಗಾಯಗಳ ಸಮೇತ ದಫನ್ ಮಾಡಲಾಗಿತ್ತು ಮತ್ತು ಅವರಲ್ಲಿ ಯಾರ ಜನಾಝ ನಮಾಝನ್ನೂ ನಿರ್ವಹಿಸಲಾಗಿರಲಿಲ್ಲ. ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಬರೆಯುತ್ತಾರೆ: ಅವರ ಜನಾಝ ನಮಾಝನ್ನು ಆ ವೇಳೆ ನಿರ್ವಹಿಸಿರಲಿಲ್ಲವಾದರೂ, ಅನಂತರ ಹಝ್ರತ್ ಪೈಗಂಬರ್(ಸ) ತನ್ನ ಮರಣಕ್ಕೆ ಸ್ವಲ್ಪ ಕಾಲ ಮುಂಚಿತವಾಗಿ ವಿಶೇಷವಾಗಿ ಉಹದ್ ಯುದ್ಧದ ಶಹೀದರ ಜನಾಝ ನಮಾಝನ್ನು ನಿರ್ವಹಿಸಿದ್ದರು.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ನಾನು ನನ್ನ ತಂದೆಗಾಗಿ ಉಹದ್ ಯುದ್ಧದ ಆರು ತಿಂಗಳ ನಂತರ ಖಬರ್ ತಯಾರು ಮಾಡಿದೆ. ಅವರನ್ನು ಅದರಲ್ಲಿ ದಫನ್ ಮಾಡಿದೆ. ನೆಲದೊಂದಿಗೆ ಸೇರಿದ್ದ ಕೆಲವು ಕೂದಲುಗಳ ಹೊರತುಪಡಿಸಿ, ಅವರ ಶರೀರದಲ್ಲಿ ಯಾವ ಬದಲಾವಣೆಯನ್ನೂ ನಾನು ಕಂಡಿರಲಿಲ್ಲ.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ)ರನ್ನು ನಾನು ಭೇಟಿಯಾದೆ. ಅವರು ಕೇಳಿದರು: ನೀನು ಏಕೆ ದುಃಖಿತನಾಗಿದ್ದೀಯಾ? ನಾನು ಹೇಳಿದೆ: ಯಾ ರಸೂಲಲ್ಲಾಹ್, ನನ್ನ ತಂದೆ ಉಹದ್ ಯುದ್ಧದಲ್ಲಿ ಶಹೀದ್ ಆದರು. ಅವರು ಸಾಲಗಳನ್ನು ಮತ್ತು ಮಕ್ಕಳನ್ನು ಬಿಟ್ಟುಹೋಗಿದ್ದಾರೆ. ಹಝ್ರತ್ ಪೈಗಂಬರ್(ಸ) ಕೇಳಿದರು: ಅಲ್ಲಾಹನು ನಿನ್ನ ತಂದೆಯನ್ನು ಭೇಟಿಯಾದ ಬಗ್ಗೆ ನಿನಗೆ ಸುವಾರ್ತೆ ತಿಳಿಸಲೇ? ಹೇಳಿರಿ, ಯಾ ರಸೂಲಲ್ಲಾಹ್ ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಮರೆಯಲ್ಲಿದ್ದುಕೊಂಡಲ್ಲದೆ ಯಾರೊಡನೆಯೂ ಸಂಭಾಷಣೆ ನಡೆಸುವುದಿಲ್ಲ. ಆದರೆ ನಿನ್ನ ತಂದೆಯನ್ನು ಅಲ್ಲಾಹನು ಜೀವಂತ ಗೊಳಿಸಿದನು ಮತ್ತು ಅವರೊಡನೆ ಮುಖಾಮುಖಿಯಾಗಿ ಸಂಭಾಷಣೆ ನಡೆಸಿದನು. ಹೇ ನನ್ನ ದಾಸ, ನೀನು ನನ್ನೊಡನೆ ಬೇಡು, ನಾನು ನಿನಗೆ ನೀಡುವೆನು ಎಂದು ಅಲ್ಲಾಹನು ಅವರೊಡನೆ ಹೇಳಿದನು. ಅವರು ಹೇಳಿದರು: ಹೇ ನನ್ನ ಪ್ರಭು, ನಿನ್ನ ಮಾರ್ಗದಲ್ಲಿ ಕೊಲ್ಲಲ್ಪಡಲು ನನ್ನನ್ನು ಪುನಃ ಜೀವಂತಗೊಳಿಸು. ಆಗ ಅಲ್ಲಾಹನು ಹೇಳಿದನು: ಒಂದು ಸಲ ಮೃತಪಟ್ಟವನನ್ನು ಮರಳಿ ಭೂಮಿಗೆ ಕಳುಹಿಸುವುದಿಲ್ಲ ಎಂದು ನಾನು ತೀರ್ಮಾನ ಮಾಡಿದ್ದೇನೆ. ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್

ಅಲ್ಲಾಹನೊಡನೆ ಹೀಗೆ ವಿನಂತಿಸಿದರು: ಹೇ ನನ್ನ ಪ್ರಭೂ, ನನ್ನ ಹಿಂದೆ ಇರುವವರಿಗೂ ಈ ಸಂಗತಿಯನ್ನು ತಲುಪಿಸು. ಆ ಸಂದರ್ಭದಲ್ಲಿ ಅಲ್ಲಾಹನು ಈ ಆಯತ್ತನ್ನು ಅವತೀರ್ಣಗೊಳಿಸಿದನು: **ವಲಾ ತಹ್‌ಸಬನ್ನಲ್ಲಧೀನ ಖುತಿಲೂ ಫೀ ಸಬೀಲಿಲ್ಲಾಹಿ ಅಮ್‌ವಾತನ್, ಬಲ್ ಅಹ್‌ಯಾಉನ್ ಇಂದ ರಬ್ಬಿಹಿಂ ಯುರ್‌ಝುಖೂನ್**. ಎಂದರೆ ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಟ್ಟವರು ಮೃತರೆಂದು ನೀವು ಭಾವಿಸಬೇಡಿರಿ. ಅವರು ತಮ್ಮ ಒಡೆಯನ ಬಳಿ ಜೀವಂತರು; ಅವರಿಗೆ ಆಹಾರ ನೀಡಲಾಗುತ್ತದೆ.

ಇವರ ನಂತರ ಪ್ರಸ್ತಾಪಿಸಲಾಗುವ ಸಹಾಬಿಯ ಹೆಸರು ಹಝ್ರತ್ ಅಬೂ ದುಜಾನ(ರ) ಎಂದಾಗಿದೆ. ಇವರ ಸಂಬಂಧ ಅನ್ಸಾರ್ ಗೋತ್ರವಾದ ಖಝ್ರಜ್‌ನ ಶಾಖೆಯ ಬನೂ ಸಾಇದದೊಂದಿಗೆ ಆಗಿತ್ತು. ಹಝ್ರತ್ ಅಬೂ ದುಜಾನ(ರ) ಬದ್ರ್, ಉಹದ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದರು. ಅನ್ಸಾರರ ಶ್ರೇಷ್ಠ ಸಹಾಬಿಯರಲ್ಲಿ ಹಝ್ರತ್ ಅಬೂ ದುಜಾನ(ರ) ಗಣಿಸಲ್ಪಡುತ್ತಿದ್ದರು. ಅವರಿಗೆ ಹಝ್ರತ್ ಪೈಗಂಬರ್(ಸ)ರು ಶಾಮಿಲಾಗಿದ್ದ ಯುದ್ಧಗಳಲ್ಲಿ ವಿಶೇಷವಾದ ಸ್ಥಾನವಿತ್ತು. ಯುದ್ಧ ನಡೆಯುವಾಗ, ಹಝ್ರತ್ ಅಬೂ ದುಜಾನ(ರ) ಬಹಳ ಶೌರ್ಯದಿಂದ ಹೋರಾಡುತ್ತಿದ್ದರು. ಅವರು ನುರಿತ ಕುದುರೆ ಸವಾರರಾಗಿದ್ದರು. ಅವರ ಬಳಿಯಲ್ಲಿ ಕೆಂಪು ಬಣ್ಣದ ಒಂದು ರೂಮಾಲು ಇತ್ತು. ಅದನ್ನು ಅವರು ಯುದ್ಧಗಳಲ್ಲಿ ಮಾತ್ರ ತಲೆಯಲ್ಲಿ ಧರಿಸುತ್ತಿದ್ದರು. ಅವರು ಕೆಂಪು ಬಣ್ಣದ ರೂಮಾಲು ಧರಿಸುವಾಗ ಅವರು ಹೋರಾಟಕ್ಕಾಗಿ ತಯಾರಾಗಿರುವರು ಎಂದು ಜನರಿಗೆ ಗೊತ್ತಾಗುತ್ತಿತ್ತು. ಧೈರ್ಯವಂತ ಮತ್ತು ವೀರಶೂರರಾದ ಜನರಲ್ಲಿ ಹಝ್ರತ್ ಅಬೂ ದುಜಾನ(ರ) ಗಣಿಸಲ್ಪಡುತ್ತಿದ್ದರು. ಮುಹಮ್ಮದ್ ಬಿನ್ ಇಬ್ರಾಹೀಂ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಅಬೂ ದುಜಾನ(ರ) ಯುದ್ಧಗಳಲ್ಲಿ ತನ್ನ ಕೆಂಪು ಬಣ್ಣದ ಮುಂಡಾಸಿನ ಕಾರಣದಿಂದ ಗುರುತಿಸಲ್ಪಡುತ್ತಿದ್ದರು. ಬದ್ರ್ ಯುದ್ಧದಲ್ಲೂ ಅವರು ತಲೆಯಲ್ಲಿ ಈ ಕೆಂಪು ಮುಂಡಾಸನ್ನು ಸುತ್ತಿದ್ದರು. ಮುಹಮ್ಮದ್ ಬಿನ್ ಉಮರ್ ವರದಿ ಮಾಡುತ್ತಾರೆ: ಹಝ್ರತ್ ಅಬೂ ದುಜಾನ(ರ) ಉಹದ್ ಯುದ್ಧದಲ್ಲೂ ಹೀಗೆಯೇ ಭಾಗವಹಿಸಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರೊಂದಿಗೆ ಸ್ಥಿರಚಿತ್ತರಾಗಿ ಇದ್ದರು. ಮರಣಕ್ಕೂ ಸಿದ್ಧರಾಗಿದ್ದೇವೆ ಎಂದು ಹೇಳಿ ಅವರು ಹಝ್ರತ್ ಪೈಗಂಬರ್(ಸ)ರೊಂದಿಗೆ ಪ್ರತಿಜ್ಞೆ ಮಾಡಿದ್ದರು. ಉಹದ್ ಯುದ್ಧದಂದು ಹಝ್ರತ್ ಅಬೂ ದುಜಾನ(ರ) ಮತ್ತು ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಹಝ್ರತ್ ಪೈಗಂಬರ್(ಸ)ರನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸಿದ್ದರು. ಹಝ್ರತ್ ಅಬೂ ದುಜಾನ(ರ) ತೀವ್ರವಾಗಿ ಗಾಯಗೊಂಡಿದ್ದರು ಮತ್ತು ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅಂದು ಶಹೀದ್ ಆದರು.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹದಿನ ದಿನದಂದು ಒಂದು ಖಡ್ಗವನ್ನು ಹಿಡಿದು ಹೀಗೆ ಹೇಳಿದರು: **'ಮನ್‌ಯಅ್‌ಖುಧು ಮಿನ್ನೀ ಹಾಧಾ'** ಇದನ್ನು ನನ್ನಿಂದ ಯಾರು ಪಡೆಯುತ್ತೀರಿ? ಎಲ್ಲರೂ ತಮ್ಮ ಕೈಗಳನ್ನು ಎತ್ತಿದರು. ನಾನು ಪಡೆಯುವೆನು, ನಾನು ಪಡೆಯುವೆನು ಎಂದು ಅವರಲ್ಲಿ ಪ್ರತಿಯೊಬ್ಬರೂ ಹೇಳುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಕೇಳಿದರು: **ಫಮನ್‌ಯಅ್‌ಖುಧುಹು ಬಿಹಖ್ಖಿಹಿ.** ಇದಕ್ಕೆ ಸಲ್ಲಬೇಕಾದ ಹಕ್ಕನ್ನು ಯಾರು ಸರಿಯಾಗಿ ಈಡೇರಿಸುವರು? ಹಝ್ರತ್ ಅನಸ್(ರ) ಹೇಳುತ್ತಾರೆ: ಆಗ ಜನರು ಸುಮ್ಮನಾದರು. ಹಝ್ರತ್ ಅಬೂ ದುಜಾನ(ರ) ಹೇಳಿದರು. ನಾನು ಅದರ ಹಕ್ಕನ್ನು ಈಡೇರಿಸುವೆನು ಎಂಬ ಭರವಸೆಯೊಂದಿಗೆ ಇದನ್ನು ಪಡೆಯುವೆನು. ಹಝ್ರತ್ ಅನಸ್(ರ) ಹೇಳುತ್ತಾರೆ: ಹೀಗೆ ಹಝ್ರತ್ ಅಬೂ ದುಜಾನ(ರ) ಆ ಖಡ್ಗವನ್ನು ಪಡೆದರು ಮತ್ತು ಮುಶ್ರಿಕರ ತಲೆಗಳನ್ನು ಉರುಳಿಸಿದರು.

ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ: ಇದರ ಹಕ್ಕೇನೆಂದು ಹಝ್ರತ್ ಅಬೂ ದುಜಾನ(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಇದರಿಂದ ಮುಸ್ಲಿಮರಲ್ಲಿ ಯಾರನ್ನೂ ಕೊಲ್ಲಬಾರದು. ಈ ಖಡ್ಗವನ್ನು ಹಿಡಿದುಕೊಂಡ ನಂತರ ಯಾವನೇ ಅವಿಶ್ವಾಸಿಗೆ ಹೆದರಿ ಓಡಿ ಹೋಗಬಾರದು. ಎಂದರೆ, ಕೆಚ್ಚೆದೆಯಿಂದ ಮತ್ತು ಸ್ಥೈರ್ಯದಿಂದ ಹೋರಾಡಬೇಕು. ಆಗ ಹಝ್ರತ್ ಅಬೂ ದುಜಾನ(ರ) ಹೇಳಿದರು: ನಾನು ಈ ಖಡ್ಗವನ್ನು ಅದರ ಹಕ್ಕಿನೊಂದಿಗೆ ಪಡೆಯುತ್ತೇನೆ. ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಹಝ್ರತ್ ಅಬೂ ದುಜಾನರಿಗೆ(ರ) ಕೊಟ್ಟರು. ಅವರು ಇದರಿಂದ ಬಹುದೇವಾರಾಧಕರ ತಲೆಗಳನ್ನು ಉರುಳಿಸಿದರು.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ: ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಒಂದು ಖಡ್ಗವನ್ನು ಹಿಡಿದು ಹೀಗೆ ಹೇಳಿದರು: ಯಾರು ಇದರ ಹಕ್ಕನ್ನು ಈಡೇರಿಸುವನೆಂದು ವಾಗ್ದಾನ ಮಾಡುವನೋ ಅವನಿಗೆ ನಾನು ಈ ಖಡ್ಗವನ್ನು ಕೊಡುತ್ತೇನೆ. ಹಲವು ಜನರು ಈ ತಲವಾರನ್ನು ಪಡೆಯಲು ನಿಂತರು. ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಹಝ್ರತ್ ಅಬೂ ದುಜಾನ ಅನ್ಸಾರಿ(ರ)ರಿಗೆ ಕೊಟ್ಟರು. ಒಂದು ಪ್ರದೇಶದಲ್ಲಿ ಮಕ್ಕಾದ ಕೆಲವು ಸಿಪಾಯಿಗಳು ಅಬೂ ದುಜಾನರ ಮೇಲೆ ಹಲ್ಲೆ ನಡೆಸಿದರು. ಒಬ್ಬ ಸೈನಿಕ ಅತ್ಯಂತ ಆವೇಶದಿಂದ ಯುದ್ಧದಲ್ಲಿ ಭಾಗವಹಿಸಿದ್ದಾಗಿ ಅವರು ಕಂಡರು. ಅವರು ಖಡ್ಗವನ್ನು ಹಿಡಿದು ಆ ವ್ಯಕ್ತಿಯ ಕಡೆಗೆ ಧಾವಿಸಿದರು. ಆದರೆ ಅನಂತರ ಅವರನ್ನು ಬಿಟ್ಟು ವಾಪಾಸ್ಸು ಬಂದರು. ಅವರನ್ನು ಏಕೆ ಬಿಟ್ಟು ಬಂದಿದ್ದೀರಿ ಎಂದು ಅವರ ಒಬ್ಬ ಸ್ನೇಹಿತನು ಅವರೊಡನೆ ಕೇಳಿದನು. ಅವರು ಹೇಳಿದರು: ನಾನು ಅವರ ಬಳಿಗೆ ಹೋದಾಗ, ಅವರು ಏನೋ ಹೇಳುತ್ತಿದ್ದರು, ಅದರಿಂದ ಅವರು ಪುರುಷನಲ್ಲ, ಸ್ತ್ರೀಯೆಂದು ನನಗೆ ಗೊತ್ತಾಯಿತು. ಹಝ್ರತ್ ಪೈಗಂಬರ್(ಸ) ನನಗೆ ಕೊಟ್ಟ ಖಡ್ಗದಿಂದ ದುರ್ಬಲ ಸ್ತ್ರೀಯೊಬ್ಬಳ ಮೇಲೆ ಹಲ್ಲೆ ನಡೆಸಲು ನನಗೆ ಮನಸ್ಸು ಬರಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಟ್ಟಿನಲ್ಲಿ, ಸ್ತ್ರೀಯರನ್ನು ಗೌರವಿಸಲು ಮತ್ತು ಆದರ ಭಾವದಿಂದ ಕಾಣಲು ಹಝ್ರತ್ ಪೈಗಂಬರ್(ಸ) ಸದಾ ಉಪದೇಶಿಸುತ್ತಿದ್ದರು. ಇದರ ಕಾರಣದಿಂದ ಸತ್ಯನಿಷೇಧಿಗಳ ಸ್ತ್ರೀಯರು ಹೆಚ್ಚು ಧೈರ್ಯದಿಂದ ಮುಸ್ಲಿಮರಿಗೆ ನಷ್ಟ ಉಂಟುಮಾಡಲು ಪ್ರಯತ್ನಿಸುತ್ತಿದ್ದರು.

ಆದರೂ ಮುಸ್ಲಿಮರು ಈ ಸಂಗತಿಗಳನ್ನು ಸಹಿಸುತ್ತಾ ಹೋಗುತ್ತಿದ್ದರು.

ಝೈದ್ ಬಿನ್ ಅಸ್ಲಮ್ ವರದಿ ಮಾಡುತ್ತಾರೆ: ಹಝ್ರತ್ ಅಬೂ ದುಜಾನ(ರ) ರೋಗಿಯಾಗಿದ್ದಾಗ, ಜನರು ಅವರ ಬಳಿಗೆ ಬಂದರು. ಆ ಸಮಯದಲ್ಲಿ ಅವರ ಮುಖ ಹೊಳೆಯುತ್ತಿತ್ತು. ಮುಖ ಹೊಳೆಯುತ್ತಿರಲು ಕಾರಣವೇನೆಂದು ಅವರೊಡನೆ ಒಬ್ಬರು ಕೇಳಿದರು. ಹಝ್ರತ್ ಅಬೂ ದುಜಾನ(ರ) ಹೇಳಿದರು: ನನ್ನ ಕರ್ಮಗಳಲ್ಲಿ ಎರಡು ಕೃತ್ಯಗಳು ನನ್ನ ಪ್ರಕಾರ ತುಂಬ ಭಾರವುಳ್ಳದ್ದೂ ದೃಢವಾದದ್ದೂ ಆಗಿವೆ. ಮೊದಲನೆಯದ್ದೇನೆಂದರೆ, ನನಗೆ ಸಂಬಂಧಪಡದ ಯಾವುದೇ ಸಂಗತಿಯನ್ನು ನಾನು ಹೇಳುವುದಿಲ್ಲ. ಎರಡನೆಯದಾಗಿ, ನನ್ನ ಹೃದಯ ಮುಸ್ಲಿಮರಿಗಾಗಿ ಯಾವಾಗಲೂ ಸ್ವಚ್ಛವಾಗಿ ಇರುತ್ತದೆ. ಹಝ್ರತ್ ಅಬೂ ದುಜಾನ(ರ) ಯಮಾಮ ಯುದ್ಧದಲ್ಲಿ ಶಹೀದ್ ಆದರು.

ಸುಳ್ಳು ಪ್ರವಾದಿತ್ವ ವಾದಿಸಿದ್ದ ಮುಸೈಲಿಮ ಕದ್ದಾಬ್, ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಮದೀನದ ಮೇಲೆ ಆಕ್ರಮಣ ನಡೆಸಲು ಉದ್ದೇಶಿಸಿದಾಗ, ಹಝ್ರತ್ ಅಬೂಬಕರ್(ರ) ಅದನ್ನು ದಮನಿಸಲು ಹಿಜರಿ 12ಕ್ಕೆ ಸೈನ್ಯವನ್ನು ಕಳುಹಿಸಿದ್ದರು. ಹಝ್ರತ್ ಅಬೂ ದುಜಾನ(ರ) ಸಹ ಈ ಸೈನ್ಯದಲ್ಲಿ ಭಾಗಿಯಾಗಿದ್ದರು. ಹಝ್ರತ್ ಅಬೂ ದುಜಾನ(ರ) ಯಮಾಮ ಯುದ್ಧದಲ್ಲಿ ಶಕ್ತವಾಗಿ ಹೋರಾಡಿದರು ಮತ್ತು ಶಹಾದತಿನ ಪದವಿಯನ್ನು ಪಡೆದರು.

(ಖುತ್‌ಬದ ಕೊನೆಯಲ್ಲಿ ಹುಝೂರ್, ಪಿಶಾವರ್ ಜಿಲ್ಲೆಯ ಸಯ್ಯದ್ ಜಲಾಲ್ ಸಾಹಿಬ್‌ರ ಮಗನಾದ ಮುಕರ್ರಮ್ ಮಹ್ಬೂಬ್ ಖಾನ್ ಸಾಹಿಬ್ ಶಹೀದರ ಬಗ್ಗೆ ಹೇಳಿದರು. ಅವರನ್ನು ಅಹ್ಮದಿಯ್ಯತಿನ ವಿರೋಧಿಗಳು ನವೆಂಬರ್ 8, 2020 ರಂದು ಬೆಳಿಗ್ಗೆ 8 ಗಂಟೆಗೆ ಪಿಶಾವರ ಜಿಲ್ಲೆಯ ಶೇಖ್ ಮುಹಮ್ಮದ್ ಗ್ರಾಮದಲ್ಲಿ ಫೈರಿಂಗ್ ಮಾಡಿ ಶಹೀದ್ ಮಾಡಿದ್ದರು **– ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಅದೇ ರೀತಿಯಲ್ಲಿ ಜಮಾಅತಿನ ಮುರಬ್ಬಿಯಾದ ಫಖ್ರ್ ಅಹ್ಮದ್ ಫರಖ್ ಸಾಹಿಬ್ ಮತ್ತು ಅವರ ಮಗನಾದ ಇಹ್ತಿಶಾಮ್ ಅಬ್ದುಲ್ಲಾಹ್ (ವಖ್ಫೆ ನೌ) ಇಬ್ಬರೂ ನವೆಂಬರ್ 1 ರಂದು ರಸ್ತೆ ಅಪಘಾತದಲ್ಲಿ ಘಟನೆಯ ಸ್ಥಳದಲ್ಲೇ ಮೃತಪಟ್ಟರು **– ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ರಬ್ವದ ಮಿಯಾ ಅಬ್ದುಲ್ಲತೀಫ್ ಸಾಹಿಬರ ಮಗನಾದ ಸನ್ಮಾನ್ಯ ಡಾಕ್ಟರ್ ಅಬ್ದುಲ್ ಕರೀಂ ಸಾಹಿಬರು ಸೆಪ್ಟೆಂಬರ್ 14ರಂದು 92ನೇ ವಯಸ್ಸಿನಲ್ಲಿ ನಿಧನರಾದರು **– ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಹುಝೂರ್ ಈ ದಿವಂಗತರ ಸ್ವಭಾವ ವೈಶಿಷ್ಟ್ಯಗಳನ್ನು ವಿವರಿಸಿದರು ಮತ್ತು ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲು, ಅವರ ಸಂಬಂಧಿಕರಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲು ದುಆ ಮಾಡಿದರು. ನಮಾಝ್ ನಂತರ ಅವರ ಜನಾಝ ನಮಾಝ್ ಗ಼ಾಯಿಬ್ ನಿರ್ವಹಿಸುವುದಾಗಿ ಘೋಷಿಸಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 13-11-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon